## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ /2021

| | | |
|---|---|---|
| ಸಾಕ್ಷಿದಾರರ ಹೆಸರು | : ಬಾಲು | ಪಿಡಬ್ಲ್ಯೂ : 14 |
| ತಂದೆಯ / ಗಂಡನ ಹೆಸರು | : ಸೋಮಣ್ಣ | ಸಿಡಬ್ಲ್ಯೂ : 16 |
| ವಯಸ್ಸು | : 27 ವರ್ಷ | |
| ಉದ್ಯೋಗ | : ಗಾರೆ ಕೆಲಸ | |
| ವಾಸಸ್ಥಳ | : ಭೈರಾಪುರ , ಟಿ.ನರಸೀಪುರ | |

**ಸಾಕ್ಷಿಯನ್ನು ಈ ದಿನ ದಿಃ 24.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಸಹಿ ಹಾಕುತ್ತೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 30.07.2021 ರಂದು ಮಾಡಿದ ಬಟ್ಟೆ ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ 16 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 16(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಒಂದು ವರ್ಷದ ಹಿಂದೆ ನಾನು ಮತ್ತು ಚಾ,ಸಾ. 15 ರವರು ಯಾವುದೋ ದೂರನ್ನು ಕೊಡಲು ಠಾಣೆಗೆ ಹೋಗಿದ್ದೆವು. ಆಗ ಪೋಲೀಸರು, ಮಹಜರ್ ಇದೆ , ಸಹಿ ಹಾಕಬೇಕು ಎಂದು ಹೇಳಿ ನನ್ನ ಸಹಿಯನ್ನು ಪಡೆದರು. ಪೋಲೀಸ್ ಠಾಣೆಯಲ್ಲಿ ಇನ್ಸ್ ಪೆಕ್ಟರ್ , ನ್ಯಾಯಾಲಯದ ಮುಂದಿರುವ ಆರೋಪಿ , ನಾವುಗಳು ಇದ್ದೆವು. ಆರೋಪಿಯ ಬಟ್ಟೆಗಳನ್ನು ತೆಗೆದು , ಪೋಟೋ ತೆಗೆದು ನಮ್ಮ ಸಹಿ ಪಡೆದರು. ಆ

ಬಟ್ಟೆಗಳನ್ನು ಯಾವ ರೀತಿ , ಹೇಗೆ ತೆಗೆದುಕೊಂಡರು ಮತ್ತು ಏನು ಮಾಡಿದರು ಎನ್ನುವುದು ನನಗೆ ಗೊತ್ತಿಲ್ಲ. ಅಲ್ಲಿ ತೆಗೆದ ಪೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಆ ಬಟ್ಟೆಗಳ ಪೋಟೋ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ 17 ರಿಂದ 21 ರವರೆಗಿನ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆ ಬಟ್ಟೆಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎಂ ಒ 6 ಮತ್ತು 7 ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿ**ದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ, **ಅನುಮತಿ ನೀಡ**ಲಾಯಿತು.)

**<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

2. ನಾವು ಠಾಣೆಗೆ ಹೋದಾಗ ಆರೋಪಿ ಠಾಣೆಯಲ್ಲಿದ್ದು , ಪೋಲೀಸರು , ಆತ ಧರಿಸಿದ್ದ ಬಟ್ಟೆಗಳನ್ನು ತೆಗೆದುಕೊಂಡು , ಆತನಿಗೆ ಬೇರೆ ಬಟ್ಟೆಗಳ ವ್ಯವಸ್ಥೆಯನ್ನು ಮಾಡಿದರು ಎನ್ನುವುದು ಸರಿ . ನಂತರ ಆ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡರು ಎನ್ನುವುದು ಸರಿ .ನಂತರ ಆ ಬಟ್ಟೆಗಳನ್ನು ಬಿಳಿಯ ಎರಡು ಬಟ್ಟೆಯ ಬ್ಯಾಗಿನಲ್ಲಿ ಹಾಕಿ , ಕಟ್ಟಿ , ಮೊಹರು ಮಾಡಿ , ನನ್ನ ಸಹಿಯನ್ನು ಪಡೆದು ಚೀಟಿಯನ್ನು ಅಂಟಿಸಿದರು ಎನ್ನುವುದು ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

3. ನಾನು ಮತ್ತು ಚಾ.ಸಾ. 15 ರವರು ಆ ಪೋಲೀಸ್ ಠಾಣೆಗೆ ಗಲಾಟೆಯ ವಿಷಯವಾಗಿ ದೂರನ್ನು ಕೊಡಲು ಹೋಗಿದ್ದೆವು. ಭೈರಾಪುರದ ಬಸ್ಸ ಸ್ಟಾಂಡ್ ನಲ್ಲಿ ನನಗೆ

ಎಣ್ಣೆ ಜಾಸ್ತಿಯಾಗಿ ಗಲಾಟೆ ಆಗಿತ್ತು. ಅವರು ನನಗೆ ಹೊಡೆದಿದ್ದರು. ಆದ್ದರಿಂದ ನನ್ನನ್ನು ಹೊಡೆದವರ ಮೇಲೆ ದೂರನ್ನು ಕೊಡಲು ಆ ದಿನ ಠಾಣೆಗೆ ಹೋಗಿದ್ದೆ. ಬರೆದಿದ್ದ ಮಹಜರ್ ಮೇಲೆ ಸಹಿ ಹಾಕು ಹೇಳಿದ್ದರಿಂದ ಸಹಿ ಹಾಕಿದೆ ಎನ್ನುವುದು ಸರಿ. ನೆಲದ ಮೇಲೆ ಬಟ್ಟೆಗಳು ಇದ್ದವು, ಅವುಗಳನ್ನು ಅಮಾನತ್ತು ಪಡಿಸಿಕೊಳ್ಳಬೇಕು ಎಂದು ಹೇಳಿ ಸಹಿಪಡೆದರು ಎನ್ನುವುದು ಸರಿ. ಅಮಾನತ್ತು ಮಹಜರ್ ನಲ್ಲಿ ಏನನ್ನು ಬರೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ನನಗೆ ಯಾವುದೇ ವಿಷಯಗಳು ಗೊತ್ತಿಲ್ಲದೇ ಇದ್ದರು ಸಹ , ಪೋಲೀಸರ ಹೇಳಿಕೆಯಂತೆ ಸಹಿ ಮಾಡಿರುತ್ತೇನೆ ಎನ್ನುವುದು ಸರಿ .

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**